ಪ್ರಸ್ತಾವಗಳನ್ನೆಲ್ಲ ವಿವೇಕಾನಂದರು ನಿಷ್ಠುರವಾಗಿ ತುಚ್ಛೀಕರಿಸಿ ತಳ್ಳಿಹಾಕಿದರು."ಶರೀರಸುಖಕ್ಕೆ ಬಲಿಯಾಗಿ ಪವಿತ್ರವಾದ ಮಾನವ ಜೀವನವನ್ನು ಹಾಳುಮಾಡಿಕೊಳ್ಳುವುದುಂಟೆ! ಮೃತ್ಯುವಿನ ಕರಿ ನೆರಳನ್ನು ನೆನೆಯುತ್ತ, ಹೊಲಸು ಆಸೆಗಳನ್ನು ಹತ್ತಿಕ್ಕಿ ಪರಮಾತ್ಮನನ್ನು ಕೂಡಬೇಕು" ಎಂದೇ ಅವರು ಸಂಕಲ್ಪತಾಳಿದರು.

ವಿವೇಕಾನಂದರ ಮನೆಯ ಕ್ರೂರ ಬಡತನದ ಅರಿವು ಪರಮಹಂಸರಿಗಾದಾಗ, "ಕಾಳಿಕಾಮಾತೆಯನ್ನು ಬೇಡಿಕೊಳ್ಳಪ್ಪಾ, ಏನಾದರೂ ದಾರಿ ತೋರಿಸುತ್ತಾಳೆ" ಎಂದು ಸಲಹೆ ನೀಡಿದರು. ವಿವೇಕಾನಂದರ ಆಧ್ಯಾತ್ಮಿಕ ಹಸಿವು ಅದೆಷ್ಟು ತೀವ್ರವಾಗಿತ್ತೆಂದರೆ, ಕಾಳಿಕಾಮಾತೆಯ ಮುಂದೆ ನಿಂತಾಗ ಅವರಿಗೆ ಸಾಂಸಾರಿಕ ವಿಚಾರಗಳೆಲ್ಲವೂ ಮರೆತೇಹೋಗುತ್ತಿದ್ದುವು. ಭಕ್ತಿಜ್ಞಾನ ವೈರಾಗ್ಯಗಳನ್ನೇ ಆ ಜಗನ್ಮಾತೆಯಲ್ಲಿ ಬೇಡಿಕೊಳ್ಳುತ್ತಿದ್ದರು. ವಿಧಿಯು ಸುರಿಸಿದ ಕಷ್ಟಗಳ ಮಳೆಯನ್ನೆಲ್ಲ ಸಹಿಸಿಕೊಂಡು ಕಲ್ಲಾಗಿಬಿಟ್ಟರು, ನಿರ್ಮಲವಾದ ತ್ಯಾಗಜೀವನಕ್ಕೆ ತಮ್ಮನ್ನು ಸಮರ್ಪಿಸಿಕೊಂಡುಬಿಟ್ಟರು. ಇಷ್ಟೆಲ್ಲದರ ನಡುವೆ ಪರಮಹಂಸರ ಕೃಪಾಶೀರ್ವಾದಗಳೇ ವಿವೇಕಾನಂದರ ಕುಟುಂಬದ ಬಡತನವನ್ನು ತೊಡೆದುಹಾಕಿ, ನೆಮ್ಮದಿಯನ್ನುಂಟುಮಾಡಿದುವು.

## ಅಪೂರ್ವ ಮಾನವತಾವಾದಿ

ಯಾವುದೇ ವಿಚಾರವನ್ನಾಗಲೀ ವಿವೇಕಾನಂದರು ಪರೀಕ್ಷೆಗೆ ಗುರಿಪಡಿಸದೆ ಒಪ್ಪಿಕೊಳ್ಳುತ್ತಿರಲಿಲ್ಲ. ಪರಮಹಂಸರನ್ನೇ ಪರೀಕ್ಷಿಸುವಷ್ಟು ಎದೆಗಾರಿಕೆ ಅವರಿಗಿತ್ತು. ಆದರೆ ಪರಮಹಂಸರನ್ನು ಪರೀಕ್ಷಿಸಿ ಶರಣಾಗತರಾದವರುಂಟೇ ಹೊರತು ಗೆದ್ದೆನೆಂದು ಬೀಗಿದವರಿಲ್ಲ. ವಿವೇಕಾನಂದರೂ ಅಂತೆಯೇ ಪರೀಕ್ಷಿಸಿ ಶರಣಾದರು. ಪರಮಹಂಸರ ಪಟ್ಟಶಿಷ್ಯರೆನಿಸಿಕೊಂಡು, ಅವರ ಮಾರ್ಗದರ್ಶನದಿಂದ ತಮ್ಮಲ್ಲಿದ್ದ ಅಲ್ಪಸ್ವಲ್ಪವಾದ ಕಾಳಿಕೆಯನ್ನೆಲ್ಲ ಕಳೆದುಕೊಂಡು ಅಪರಂಜಿಯಾಗಿಬಿಟ್ಟರು; ನಿವೃತ್ತಿಮಾರ್ಗದ ಪಥಿಕರಾಗಿಬಿಟ್ಟರು.

ಪರಮಹಂಸರು ಮಹಾಸಮಾಧಿಯನ್ನು ಪಡೆದುಕೊಂಡ ತರುವಾಯ, ಅವರಲ್ಲಿ ಅನುರಕ್ತರಾಗಿದ್ದ ಶಿಷ್ಯರು ದಿಕ್ಕು ತಪ್ಪಿದವರಂತಾಗಿ ಎತ್ತೆತ್ತಲೋ ಚದುರಿಹೋದರು. ಆದರೆ ವಿವೇಕಾನಂದರು ಸುಮ್ಮನಾಗಲಿಲ್ಲ. ಸದ್ಗುರುವನ್ನೇ ಸ್ಮರಿಸುತ್ತ, ಅವರ ಚಿತಾಭಸ್ಮವನ್ನೇ ತಮ್ಮ ದಿವ್ಯಸಂಪದವೆಂದು ಭಾವಿಸುತ್ತ, ಅವರನ್ನೆಲ್ಲ ಸಂಘಟಿಸಿ ಸಂನ್ಯಾಸಜೀವನಕ್ಕೆ ಹುರಿದುಂಬಿಸಿದರು. ತಾವು ಶಾಸ್ತ್ರೋಕ್ತವಾಗಿ ಸಂನ್ಯಾಸವನ್ನು ಸ್ವೀಕರಿಸಿದ್ದಲ್ಲದೆ ತಮ್ಮ ನೇತೃತ್ವದಲ್ಲಿ ಮಿಕ್ಕವರಿಗೂ ಸಂನ್ಯಾಸದೀಕ್ಷೆಕೊಡಿಸಿ, ಅವರಿಗೊಪ್ಪುವ ಸಂನ್ಯಾಸಾಶ್ರಮ ನಾಮಗಳನ್ನು ನೀಡಿದರು. ಬಾಡಿಗೆ ಮನೆಯೊಂದರಲ್ಲಿ ಶ್ರೀರಾಮಕೃಷ್ಣರ ಹೆಸರಿನಲ್ಲಿ ಒಂದು ಮಠವನ್ನು ತತ್ಕಾಲಕ್ಕೆ ಸ್ಥಾಪಿಸಿದರು. ವಿವೇಕಾನಂದರ ನಾಯಕತ್ವವಿರದಿದ್ದರೆ ಇಂದು ವಟವೃಕ್ಷವಾಗಿ ಜಗತ್ತನ್ನೆಲ್ಲ ವ್ಯಾಪಿಸಿಕೊಂಡಿರುವ ರಾಮಕೃಷ್ಣ ಮಹಾಸಂಘವೆಂಬ ದಿವ್ಯಸಂಸ್ಥೆಯೊಂದು ರೂಪುತಳೆಯುವುದು ಸಾಧ್ಯವಿರಲಿಲ್ಲ. ಲೋಕಕಲ್ಯಾಣದ ಭದ್ರಬುನಾದಿಯನ್ನು ರೂಪಿಸಿದ ಅಪೂರ್ವ ಮಾನವತಾವಾದಿ ಅವರಾದರು.

## ಹರಿಯುವ ನೀರಿನ ನಿರ್ಮಲತೆ

ಮಠವನ್ನು ಕಟ್ಟಿದ ಬಳಿಕ ವಿವೇಕಾನಂದರು ಅದರೊಳಗೆ ತಾವು ಸ್ಥಾಪನೆಗೊಳ್ಳಲಿಲ್ಲ. ಪರಿವ್ರಾಜಕರಾಗಿ ಭರತಖಂಡದ ನೂರಾರು ದಿವ್ಯಕ್ಷೇತ್ರಗಳಲ್ಲಿ ಸಂಚರಿಸಿ ಅಧ್ಯಾತ್ಮಸಾಧನೆಯಲ್ಲಿ ಎತ್ತರೆತ್ತರಕ್ಕೆ ಏರಿಬಿಟ್ಟರು, ಲೋಕಾನುಭವಸಂಪನ್ನರಾಗಿಬಿಟ್ಟರು. ಲೋಕದ ಬಡಜನರ ಕಷ್ಟಕಾರ್ಪಣ್ಯಗಳನ್ನು ಕಣ್ಣಾರೆ ಕಂಡು, ಅದನ್ನು ಪರಿಹರಿಸಲು ತಮ್ಮಿಂದಾಗುವುದನ್ನೆಲ್ಲ ಶಕ್ತಿಮೀರಿ ಮಾಡಬೇಕೆಂದು ಸಂಕಲ್ಪಿಸಿದರು. ಖೇತ್ರಿ, ಆಳ್ವಾರ್, ಮೈಸೂರು, ರಾಮನಾಡ್ ಮುಂತಾದ ಪ್ರಾಂತ್ಯಗಳ ರಾಜಮಹಾರಾಜರ ಅರಮನೆಗಳನ್ನು ಹೊಕ್ಕು ತಮ್ಮ ಧೀರೋದಾತ್ತ ವಿಚಾರಧಾರೆಯಿಂದ ಅವರನ್ನೆಲ್ಲ ಜಾಗೃತಗೊಳಿಸಿದರು.

ಖೇತ್ರಿಯಲ್ಲಿದ್ದಾಗ ಒಂದುಸಂಜೆ ಮಹಾರಾಜರು ತಮ್ಮ ಆಸ್ಥಾನನರ್ತಕಿಯ ಸಂಗೀತಗೋಷ್ಠಿಯಲ್ಲಿ ಪಾಲ್ಗೊಳ್ಳಬೇಕೆಂದು ವಿವೇಕಾನಂದರನ್ನು ಪ್ರಾರ್ಥಿಸಿದರು. ನರ್ತಕಿಯೂ ಮಹಾತ್ಮರು ಬರುತ್ತಾರೆಂದು ಆಸೆಯಿಂದ ನಿರೀಕ್ಷಿಸುತ್ತಿದ್ದಳು. "ಸಂನ್ಯಾಸಿಗಳಿಗೆ ಅಂತಹ ಸಭೆಗಳು ಸಲ್ಲುವುದಿಲ್ಲ" ಎಂದು ವಿವೇಕಾನಂದರು ಪಾಲ್ಗೊಳ್ಳಲು ಒಪ್ಪಲಿಲ್ಲ. ನರ್ತಕಿಯು ಅದರಿಂದ ಅತ್ಯಂತ ನಿರಾಶೆಗೊಂಡಳು, ನೋವೂ ಕಾಡಿತು. ನರ್ತಕಿಯಾದರೋ ತನ್ನ ಕಾರ್ಯಕ್ರಮದ ಪ್ರಾರಂಭದಲ್ಲಿ, **"ನೋಡದಿರು ದೋಷವನು ಎನ್ನ ದೊರೆಯೇ, ಸಮದರ್ಶಿ ನಿನ್ನ ಹೆಸರಲ್ಲವೇ ಹರಿಯೇ"** ಎಂಬ ಸೂರದಾಸರ ಹಿಂದೀಭಾಷೆಯ ಗೀತೆಯೊಂದನ್ನು ಹಾಡುತ್ತ ತನ್ನ ಮನದಳಲನ್ನೆಲ್ಲ ಆ ಮೂಲಕ ತೋಡಿಕೊಂಡಳು. ದೂರದಲ್ಲಿ ಏಕಾಂತದಲ್ಲಿ ಕುಳಿತಿದ್ದ ವಿವೇಕಾನಂದರಿಗೆ ಆ ಗೀತೆ ಕೇಳಿಸಿತು, ಅಷ್ಟು ಮಾತ್ರವಲ್ಲ ಅವರ ಕೋಮಲಹೃದಯವು ಆ ನೋವುತುಂಬಿದ ರಾಗಮಾಧುರ್ಯದಿಂದ ಕರಗಿಹೋಯಿತು. "ವೇಶ್ಯೆಯೆಂದು ಸಮಾಜದಲ್ಲಿ ಹಗುರವಾಗಿ ಕಾಣುವ ಆ ಮಹಿಳೆಯನ್ನು ನಾನು ಕೂಡ ಉಪೇಕ್ಷಿಸುವುದು ಸಲ್ಲದು" ಎಂದು ತಮಗೆ ತಾವೇ ಹೇಳಿಕೊಂಡು, ಮೇಲೆದ್ದುಬಂದು, ಆ ಗೋಷ್ಠಿಯಲ್ಲಿ ಪಾಲ್ಗೊಂಡರು. ದೀನದಲಿತರ ದುಃಖದುಮ್ಮಾನಗಳಿಗೆ ತಮ್ಮ ಬದುಕಿನುದ್ದಕ್ಕೂ ಸ್ಪಂದಿಸಿದ ಮಹಾತ್ಮರು ಆ ವಿವೇಕಾನಂದರು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕೆ!

## ವಿಶ್ವವೀರ ವಿವೇಕಾನಂದ

೧೮೯೩ರಲ್ಲಿ ಅಮೇರಿಕದ ಶಿಕಾಗೋನಗರದಲ್ಲಿ ಸರ್ವಧರ್ಮಸಮ್ಮೇಳನದಲ್ಲಿ ಭಾಗವಹಿಸುವಲ್ಲಿಂದ ವಿವೇಕಾನಂದರ ವ್ಯಕ್ತಿತ್ವವು ವಿಶ್ವವ್ಯಾಪಿಯಾಗಿ ಅರಳಿಕೊಂಡುಬಿಟ್ಟಿತು. ಆ ಸಮ್ಮೇಳನದಲ್ಲಿ ಪಾಲ್ಗೊಳ್ಳಲು ಗಣ್ಯವ್ಯಕ್ತಿಯೊಬ್ಬರಿಂದ ಒಂದು ಪರಿಚಯಪತ್ರ ಪಡೆದಿರಬೇಕಾಗಿತ್ತು. ವಿವೇಕಾನಂದರೊಡನೆ ವಿಚಾರವಿನಿಮಯದಿಂದ ಬೆರಗಾಗಿದ್ದ ಜಾನ್‌ರೈಟ್ ಎಂಬ ಹಾರ್ವರ್ಡ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರೊಬ್ಬರು, "ನಮ್ಮ ವಿಶ್ವವಿದ್ಯಾನಿಲಯಗಳ ವಿದ್ವಾಂಸರೆನಿಸಿದ ಪ್ರಾಧ್ಯಾಪಕರನ್ನೆಲ್ಲ ತಕ್ಕಡಿಯ ಒಂದು ತಟ್ಟೆಯಲ್ಲಿ ಕೂರಿಸಿ, ವಿವೇಕಾನಂದರೊಬ್ಬರನ್ನು ಇನ್ನೊಂದು ತಟ್ಟೆಯಲ್ಲಿ ಕೂರಿಸಿ, ತೂಕಮಾಡಿದರೆ, ವಿವೇಕಾನಂದರ ವಿದ್ವತ್ತಿನ ತೂಕವೇ ಹೆಚ್ಚಾಗುತ್ತದೆಯೆಂಬುದನ್ನು ತಿಳಿಯಿರಿ" ಎಂಬ ಸಾರಾಂಶದಿಂದ ಕೂಡಿದ ಪತ್ರವೊಂದನ್ನು ಬರೆದುಕೊಟ್ಟರು.

'ಅಮೇರಿಕದ ಸೋದರಸೋದರಿಯರೆ' ಎಂಬ ಅಮೋಘವಾದೊಂದು ಸಂಬೋಧನ ಮಾತ್ರದಿಂದಲೇ ವಿವೇಕಾನಂದರು ಆ ಜನಸ್ತೋಮವನ್ನು ಅಯಸ್ಕಾಂತದಂತೆ ತಮ್ಮತ್ತ ಸೆಳೆದುಕೊಂಡು, ಅವರನ್ನೆಲ್ಲಾ ತಮ್ಮ ಉಪನ್ಯಾಸದಿಂದ ಮಂತ್ರಮುಗ್ಧರನ್ನಾಗಿಸಿಬಿಟ್ಟರು. ಭಾರತೀಯ ಸನಾತನಧರ್ಮದ ಸಂದೇಶಗಳು ಅಡಕವಾಗಿರುವ

ಉಪನಿಷತ್ತು, ಭಗವದ್ಗೀತೆಗಳ ವಿಚಾರಗಳನ್ನೇ ತಿಳಿಯಾದ ಭಾಷೆಯಲ್ಲಿ ಆ ರಾಷ್ಟ್ರದ ಜಿಜ್ಞಾಸುಗಳಿಗೆ ಬೋಧಿಸಿ ಅವರನ್ನೆಲ್ಲಾ ಪರವಶಗೊಳಿಸಿದರು. ಹಲವು ತತ್ತ್ವಜ್ಞಾನಿಗಳೂ, ವಿಜ್ಞಾನಿಗಳೂ, ಗಣ್ಯಪುರುಷರೂ, ಕಲಾಕೋವಿದರೂ ವಿವೇಕಾನಂದರ ಉಪನ್ಯಾಸಗಳಿಂದ ಪ್ರಭಾವಿತರಾಗಿ ಅವರ ಆರಾಧಕರಾಗಿಬಿಟ್ಟರು. ಹಾಗೆಯೇ ಇಂಗ್ಲೆಂಡಿಗೂ ಭೇಟಿಕೊಟ್ಟು ಹಲವು ಉಪನ್ಯಾಸಗಳನ್ನು ನಡೆಸಿಕೊಟ್ಟರು. ಆ ರಾಷ್ಟ್ರಗಳಲ್ಲಿ ವೇದಾಂತಚಿಂತನೆಗಾಗಿ ಅಲ್ಲಲ್ಲಿ ಸಂಘಸಂಸ್ಥೆಗಳು ವಿವೇಕಾನಂದರ ಪ್ರಭಾವದಿಂದ ಸ್ಥಾಪನೆಗೊಂಡುವು. ಹೀಗೆ ಭಾರತದ ಲೆಕ್ಕದಲ್ಲಿ ಸಾಮಾನ್ಯ ಸಂನ್ಯಾಸಿಯೊಬ್ಬರು ವಿಶ್ವವಿಜೇತರಾಗಿ ಬೆಳೆದರೆಂಬುದು ಜಗತ್ತಿನ ವಿಸ್ಮಯಗಳಲ್ಲೊಂದೆಂಬಂತೆ ಕೊಂಡಾಟಕ್ಕೆ ಪಾತ್ರವಾಯಿತು.

## ಏಳಿ ಎದ್ದೇಳಿ ಗುರಿಮುಟ್ಟುವವರೆಗೆ ನಿಲ್ಲದಿರಿ

೧೮೯೭ರಲ್ಲಿ ಭಾರತಕ್ಕೆ ಮರಳಿದ ವಿವೇಕಾನಂದರು ತಮ್ಮ ಜನಜಾಗೃತಿಯ ಹಾಗೂ ಲೋಕಸೇವೆಯ ಕಾರ್ಯಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ನೆರವೇರಿಸುವಲ್ಲಿ ಯಶಸ್ವಿಯಾದರು. ರಾಮಕೃಷ್ಣ ಮಹಾಸಂಘವನ್ನು ರೂಪುಗೊಳಿಸಿ ಅದರ ಧ್ಯೇಯಾದರ್ಶಗಳನ್ನೆಲ್ಲ ವ್ಯವಸ್ಥೆಗೊಳಿಸಿಕೊಟ್ಟರು. ಹಲವು ಶಿಷ್ಯರನ್ನು ಭವಿಷ್ಯದ ಪ್ರಚಾರಕಾರ್ಯ, ಸೇವಾಕಾರ್ಯಗಳಿಗಾಗಿ ಸಿದ್ಧಗೊಳಿಸಿದರು. ಅದೇ ಹೊತ್ತಿನಲ್ಲಿ ಕೊಲ್ಕೊತ್ತೆಯಲ್ಲಿ ಪ್ಲೇಗುಮಾರಿಯು ಅಬ್ಬರಿಸತೊಡಗಿದಾಗ ಜೀವಭಯವನ್ನು ತೊರೆದು ತಮ್ಮ ಗುರುಭಾಯಿಗಳೊಡನೆ ಪರಿಹಾರಕಾರ್ಯಗಳಿಗೆ ಧುಮುಕಿದರು. ೧೮೯೮ರಲ್ಲಿ ಸ್ವತಂತ್ರವಾದ ಬೇಲೂರುಮಠದ ನಿರ್ಮಾಣವಾಗಿ ಅದನ್ನು ಪರಮಹಂಸರ ಸ್ಮರಣೆಗೆ ಸಮರ್ಪಿಸಿದರು. ಅದಾದಬಳಿಕ ಮತ್ತೊಮ್ಮೆ ಅಮೇರಿಕಾ ಇಂಗ್ಲೆಂಡುಗಳತ್ತ ಧಾವಿಸಿ ಬಿರುಗಾಳಿಯಂತೆ ಸಂಚರಿಸಿ, ತಮ್ಮ ವೇದಾಂತ ಪ್ರಚಾರದ ಕಾರ್ಯಗಳನ್ನು ಅತಿಶಯವಾಗಿ ಸಂಪನ್ನಗೊಳಿಸಿ ೧೯೦೦ರಲ್ಲಿ ಭಾರತಕ್ಕೆ ಹಿಂದಿರುಗಿ ಬಂದರು. ತಮ್ಮ ಬದುಕು ಕೊನೆಗಾಣುವವರೆಗೂ ಲೋಕಹಿತವನ್ನೇ ಗುರಿಯಾಗಿಸಿ ಸೇವಾತತ್ಪರರಾಗಿದ್ದುಬಿಟ್ಟರು.

ವಿವೇಕಾನಂದರು ತಮ್ಮ ಬದುಕು ಕೊನೆಯಾಗುತ್ತಿದೆಯೆಂಬುದನ್ನು ಪೂರ್ವಭಾವಿಯಾಗಿಯೇ ಅರಿತುಕೊಂಡುಬಿಟ್ಟಿದ್ದರು. ೧೯೦೨ ಜುಲೈತಿಂಗಳಿನ ನಾಲ್ಕನೆಯ ತಾರೀಖು ಕಾಲಿಟ್ಟಿತು. ಅದು ಅವರ ಜೀವಿತದ ಕೊನೆಯ ದಿನವಾಗಿತ್ತು. ಅಂದೇನೂ ಅವರು ರೋಗಕ್ಕೆ ತುತ್ತಾಗಿ ಹಾಸುಗೆ ಹಿಡಿದಿರಲಿಲ್ಲ. ಉಲ್ಲಾಸಮಯತೆ, ಆನಂದಮಯತೆಗಳು ಎಂದೂ ಅವರ ಮುಖಕಮಲದಿಂದ ಮರೆಯಾಗಲಿಲ್ಲ. ಏಕಾಂತದಲ್ಲಿ ಧ್ಯಾನ, ಜಗನ್ಮಾತೆಯ ಕೀರ್ತನೆ ಮುಂತಾದುವನ್ನು ಹೃದ್ಯವಾಗಿ ನೆರವೇರಿಸಿದರು. ಗುರುಭಾಯಿಗಳೊಡನೆ ಹರ್ಷಚಿತ್ತರಾಗಿ ಭೋಜನದಲ್ಲಿ ಪಾಲ್ಗೊಂಡರು. ಮಧ್ಯಾಹ್ನದ ಬಳಿಕ ಬ್ರಹ್ಮಚಾರಿಗಳಿಗೆ ಸಂಸ್ಕೃತವ್ಯಾಕರಣದ ಪಾಠ ಹೇಳಿಕೊಟ್ಟರು. ಅದಾದಮೇಲೆ ಬೇಲೂರುಮಠದಲ್ಲಿ ವೇದವಿದ್ಯಾಲಯವೊಂದನ್ನು ಸ್ಥಾಪಿಸಬೇಕೆಂಬ ವಿಚಾರವನ್ನು ಗುರುಭಾಯಿಗಳೊಡನೆ ಮಾತನಾಡುತ್ತ ಸ್ವಲ್ಪ ಹೊತ್ತು ಸಂಜೆಯ ವಾಯುವಿಹಾರವನ್ನು ಮುಗಿಸಿಬಂದರು. ಸಂಧ್ಯಾಕಾಲದ ಆರತಿ ಮುಗಿಯುತ್ತಿದ್ದಂತೆಯೇ ವಿವೇಕಾನಂದರು ಧ್ಯಾನಮಗ್ನರಾಗಿಬಿಟ್ಟರು. ಆಮೇಲೆ ಆಯಾಸವೆಂದೆನಿಸಿ ಮೆಲ್ಲಗೆ ಹಾಸುಗೆಯಮೇಲೆ ಮಲಗಿಬಿಟ್ಟರು. ರಾತ್ರಿ ಒಂಬತ್ತರ ವೇಳೆಗೆ ಒಂದೆರಡುಬಾರಿ ದೀರ್ಘವಾಗಿ ಉಸಿರಾಡಿ, ಬ್ರಹ್ಮರಂಧ್ರದ ಮೂಲಕ ಕೊನೆಯುಸಿರು ಹಾದುಹೋಗುವಂತೆ ಮಾಡಿಬಿಟ್ಟರು. 'ನಾನು ನಲವತ್ತನ್ನು ದಾಟುವುದಿಲ್ಲ' ಎಂದು ವಿವೇಕಾನಂದರೇ ನುಡಿದಿದ್ದ ವಾಣಿ ಸತ್ಯವಾಯಿತು. ಅಂದಿಗೆ ಅವರಿಗೆ ಮೂವತ್ತೊಂಬತ್ತು ವರ್ಷ, ಐದುತಿಂಗಳು, ಇಪ್ಪತ್ತನಾಲ್ಕುದಿನಗಳಾಗಿದ್ದುವು. 'ಶರಣರ ಗುಣ ಮರಣದಲ್ಲಿ ನೋಡು' ಎಂಬಂತೆ ಅವರು ಸುಖಮರಣವನ್ನು ತಮ್ಮದಾಗಿಸಿಕೊಂಡರು.

ಒಬ್ಬ ಮನುಷ್ಯನು ಎಷ್ಟುವರ್ಷ ಬದುಕಿರಬೇಕು ಎಂಬುದು ಮುಖ್ಯವಲ್ಲ. ಬದುಕಿದ್ದಷ್ಟು ಕಾಲಾವಧಿಯಲ್ಲಿ ಮಾಡಿದ ಸಾಧನೆಯೇ ಮುಖ್ಯವಾದುದು. ಒಬ್ಬ ಮಹಾವ್ಯಕ್ತಿ ನೂರುವರ್ಷ ಬದುಕಿದ್ದರೆ ಏನು ಸಾಧನೆ ಮಾಡಬಹುದಾಗಿತ್ತೋ ಅಂತಹ ಸಾಧನೆಯನ್ನು ವಿವೇಕಾನಂದರು ತಮ್ಮ ಕಿರಿದಾದ ಜೀವಮಾನಾವಧಿಯಲ್ಲಿಯೇ ನೆರವೇರಿಸಿ ನಿರ್ಗಮಿಸಿಬಿಟ್ಟರು. ಬಸವಣ್ಣನವರ ಈ ಒಂದು ವಚನ ಪ್ರಸ್ತುತಕ್ಕೆ ವಿವೇಕಾನಂದರ ಜೀವಿತಕ್ಕೆ ಚೆನ್ನಾಗಿ ಒಪ್ಪುತ್ತದೆ ನೋಡಿ:

**ಲೇಸೆನಿಸಿಕೊಂಡು ಐದು ದಿನ ಬದುಕಿದರೇನು**
**ಲೇಸೆನಿಸಿಕೊಂಡು ನಾಲ್ಕುದಿನ ಬದುಕಿದರೇನು**
**ಲೇಸೆನಿಸಿಕೊಂಡು ಮೂರುದಿನ ಬದುಕಿದರೇನು**
**ಲೇಸೆನಿಸಿಕೊಂಡು ಎರಡುದಿನ ಬದುಕಿದರೇನು**
**ಕೂಡಲಸಂಗನ ಶರಣರ ವಚನದಲ್ಲಿ**
**ಲೇಸೆನಿಸಿಕೊಂಡು ಒಂದೇಒಂದುದಿನ ಬದುಕಿದರೆ ಸಾಕು ॥**

## ಕವಿ – ಕಾವ್ಯನಾಯಕ

ಲೋಕದಲ್ಲಿ ಕೆಲವರು ಕಾವ್ಯಗಳನ್ನು ರಚಿಸುತ್ತಾರೆ, ಮತ್ತೆ ಕೆಲವರು ಕಾವ್ಯಗಳಿಗೆ ನಾಯಕರಾಗುತ್ತಾರೆ. ವಿವೇಕಾನಂದರಾದರೋ ಕಾವ್ಯವನ್ನೂ ಬರೆದರು, ಕಾವ್ಯನಾಯಕರೂ ಆದರು. ಅವರ ಉಪನ್ಯಾಸ ಸಂಪುಟಶ್ರೇಣಿಗಳೆಲ್ಲ ಕಾವ್ಯಮಯವೂ ಪ್ರೌಢವೂ ವಿಚಾರಭರಿತವೂ ಆಗಿ ಬೆಳಗುತ್ತಿವೆ. ವಿವೇಕಾನಂದರ ಜೀವನ–ಸಾಧನೆ–ಸಂದೇಶಗಳನ್ನು ಕುರಿತಂತೆ ಬೇಕಾದಷ್ಟು ಗ್ರಂಥಗಳು ನಿರ್ಮಾಣಗೊಂಡು ಅವರೇ ಆ ಕೃತಿಗಳ ನಾಯಕಮಣಿಯಾಗಿದ್ದಾರೆ. ಹೀಗೆ ವಿವೇಕಾನಂದರದೊಂದು ಅನುಪಮವಾದ ವ್ಯಕ್ತಿತ್ವ.

ವಿವೇಕಾನಂದರ ವ್ಯಕ್ತಿತ್ವವು ಬಾಲ್ಯ, ಯೌವನ, ಸಂನ್ಯಾಸಜೀವನ ಎಂಬ ಮೂರು ಹಂತಗಳಲ್ಲಿ ಅತಿ ರಭಸದಿಂದ ವಿಕಸನಗೊಂಡು ಪರಿಮಳಬೀರಿದುದೇ ಒಂದು ರೋಚಕವಾದ ಕಥಾಪ್ರಸಂಗ. ಲೋಕದಲ್ಲಿ ಎರಡು ಬಗೆಯ ಹೂಗಳಿವೆ. ಕೆಲವು ಹೂಗಳಿಗೆ ಕಣ್ಸೆಳೆಯುವ ಬಣ್ಣವೇನೂ ಇರುವುದಿಲ್ಲ, ಆದರೆ ಒಳ್ಳೆಯ ಪರಿಮಳವಿರುತ್ತದೆ. ಮತ್ತೆ ಕೆಲವು ಹೂಗಳಿಗೆ ಕಣ್ಸೆಳೆಯುವ ಬಣ್ಣವೇನೋ ಇರುತ್ತದೆ, ಆದರೆ ಒಳ್ಳೆಯ ಪರಿಮಳವೇನೂ ಇರುವುದಿಲ್ಲ. ಬಣ್ಣ ಹಾಗೂ ಒಳ್ಳೆಯ ಪರಿಮಳಗಳೆರಡನ್ನೂ ಪಡೆದುಕೊಂಡ ಹೂವುಗಳು ವಿರಳ. ವಿವೇಕಾನಂದರಾದರೋ ಬಣ್ಣ–ಪರಿಮಳಗಳೆರಡನ್ನೂ ಸಮಾನವಾಗಿ ಪಡೆದುಕೊಂಡು, ಪರಮಹಂಸರ ಪುಷ್ಪೋದ್ಯಾನದ ದಿವ್ಯಕುಸುಮವಾಗಿಬಿಟ್ಟರು.

ಅವರು ಬೆಳಕಿನಿಂದ ಬಂದರು, ಬೆಳಕಿನಲ್ಲಿಯೇ ಇದ್ದರು, ಜಗಕೆಲ್ಲ ಬೆಳಕನ್ನೇ ತೋರಿ ಬೆಳಕಿನಲ್ಲಿಯೇ ಒಂದಾಗಿಬಿಟ್ಟರು. ಅವರೊಬ್ಬ ಪೂರ್ಣಪುರುಷ; ಪರಿಪೂರ್ಣತೆಯ ಪಾಠವನ್ನು ಜಗತ್ತಿಗೆ ಬೋಧಿಸಿ, ಸಾಧಿಸಿ ಕಣ್ಮರೆಯಾಗಿಬಿಟ್ಟರು. ಅವರ ಕೀರ್ತಿ ದಿಗಂತವಿಶ್ರಾಂತವಾಗಿಬಿಟ್ಟಿತು; ಅವರ ಸತ್ಕಾರ್ಯಶ್ರೇಣಿಗಳು ಅಜರಾಮರವಾಗಿಬಿಟ್ಟವು.

# ವಿದ್ವತ್ತಿನ ಮೇರುಶಿಖರ

ಹೆಚ್. ವಿ. ನಾಗರಾಜ ರಾವ್

**ಸ್ವಾಮಿ ವಿವೇಕಾನಂದರ ವಿದ್ವತ್ತು ಜಗತ್ಪ್ರಸಿದ್ಧವಾದುದು. ಈ ಪ್ರತಿಭಾಸೂರ್ಯನು ಪೂರ್ವ ಮತ್ತು ಪಶ್ಚಿಮದ ವಿದ್ವಾಂಸರ ಹೃದಯಗಳನ್ನು ತನ್ನ ಉಜ್ವಲ ಕಾಂತಿಯಿಂದ ಗೆದ್ದನು. ಈ ವಿದ್ವತ್ತಿನ ಆಳ ಸಾಗರದಂತೆ; ವಿಸ್ತಾರ ಆಕಾಶದಂತೆ. ಈ ಅಂಶವನ್ನು ಸಮರ್ಥವಾಗಿ ವಿಶ್ಲೇಷಿಸಿರುವ ಲೇಖಕರು ಸುವಿಖ್ಯಾತ ಸಂಸ್ಕೃತ ವಿದ್ವಾಂಸರು. ಮೈಸೂರಿನ ಪ್ರಾಚ್ಯ ವಿದ್ಯಾ ಸಂಶೋಧನಾ ಸಂಸ್ಥೆಯ ಹಿರಿಯ ಸಂಶೋಧಕರಾಗಿದ್ದ ಇವರು ದೇಶವಿದೇಶಗಳಲ್ಲಿ ಸಂಸ್ಕೃತ ಭಾಷೆಯ ಬೋಧನೆ ಮಾಡಿದ್ದಾರೆ. ಹಾಗೆಯೇ ಇವರು ಬಹು ಉತ್ತಮ ವಾಗ್ಮಿಗಳು ಮತ್ತು ಬರಹಗಾರರು ಕೂಡ.**

**ದ್ವೇ ವರ್ತ್ಮನೀ ಗಿರಾಂ ದೇವ್ಯಾಃ ಶಾಸ್ತ್ರಂ ಚ ಕವಿಕರ್ಮ ಚ ।**
**ಪ್ರಜ್ಞೋಪಜ್ಞಂ ತಯೋರಾದ್ಯಂ ಪ್ರತಿಭೋದ್ಭವಮಂತಿಮಮ್॥**

– *ಭಟ್ಟ ತೌತ*

ಶಾಸ್ತ್ರ – ಕಾವ್ಯ ಎಂಬುವು ಸರಸ್ವತಿಯ ಎರಡು ಮಾರ್ಗಗಳು. ಅವುಗಳಲ್ಲಿ ಮೊದಲನೆಯದಾದ ಶಾಸ್ತ್ರ ಪ್ರಜ್ಞೆಯಿಂದ ನಿರ್ಮಿತವಾಗುತ್ತದೆ. ಎರಡನೆಯದಾದ ಕಾವ್ಯವಾದರೋ ಪ್ರತಿಭೆಯಿಂದ ಹುಟ್ಟುತ್ತದೆ. ಶಾಸ್ತ್ರಗಳ ಆಳವಾದ ಮತ್ತು ದೀರ್ಘಕಾಲದ ಅಧ್ಯಯನದಿಂದ, ಪ್ರವಚನದಿಂದ ಮತ್ತು ಅನುಶೀಲನದಿಂದ ವಿದ್ವತ್ತು (ಪಾಂಡಿತ್ಯ, ವೈದುಷ್ಯ) ಲಬ್ಧವಾಗುತ್ತದೆ. ಪ್ರತಿಭೆ ಸಹಜ, ಎಂದರೆ ಹುಟ್ಟಿನಿಂದಲೇ ಬರುವ ಶಕ್ತಿವಿಶೇಷ. ಆದರೆ ವಿದ್ವತ್ತು ಯಾರಿಗೂ ಹಾಗೆ ತಾನಾಗಿಯೇ ಬರುವುದಲ್ಲ. ಅಧ್ಯಯನ – ಅಧ್ಯಾಪನಗಳ ಪರಿಪಕ್ವತೆಯಿಂದ ಅದು ಸಿದ್ಧಿಸುವುದು. ಪ್ರಜ್ಞೆ ಎಂದರೆ ಗ್ರಹಿಸುವ ಮತ್ತು ಗ್ರಹಿಸಿದ್ದನ್ನು ಉಳಿಸಿಕೊಳ್ಳುವ ಬುದ್ಧಿ. **'ಧೀರ್ಧಾರಣಾವತೀ ಮೇಧಾ'** ಎಂಬುದು ಇಲ್ಲಿ ಮುಖ್ಯ ಅಂಶ.

ಸ್ವಾಮಿ ವಿವೇಕಾನಂದರ ಜೀವನವನ್ನೂ, ಅವರು ರಚಿಸಿದ ಗ್ರಂಥಗಳನ್ನೂ, ನೀಡಿದ ಭಾಷಣಗಳನ್ನೂ ನಾವು ನೋಡಿದರೆ ಅವರು ಪ್ರಜ್ಞಾ–ಪ್ರತಿಭೆಗಳ ಸಂಗಮವಾಗಿದ್ದರು ಎಂಬುದು ಗೋಚರವಾಗುತ್ತದೆ. ಒಂದು ವಿಷಯವನ್ನು ಕೇಳಿದರೆ ಸಾಕು, ಅಥವಾ ಗ್ರಂಥವನ್ನು ಒಮ್ಮೆ ಓದಿದರೆ ಸಾಕು, ಅದರ ಸಾರಸರ್ವಸ್ವವನ್ನೂ ಗ್ರಹಿಸುವ ಅಸಾಧಾರಣ ಶಕ್ತಿ ಸ್ವಾಮೀಜಿಯವರಿಗೆ ಇತ್ತು. ಅಷ್ಟು ಓದಲು ಮತ್ತು ಅದನ್ನೆಲ್ಲ ಜೀರ್ಣಿಸಿಕೊಂಡು ವಿಶ್ವವೇ ಒಪ್ಪಿ ತಲೆದೂಗುವಂತೆ ಮಾಡಲು ಅವರಿಗೆ ಕಾಲ ಎಲ್ಲಿತ್ತು? ಪಾಶ್ಚಾತ್ಯ ಮತ್ತು ಪೌರಸ್ತ್ಯ ದರ್ಶನಪರಂಪರೆಗಳೆಂಬ ಎರಡು ಕಡಲುಗಳನ್ನೂ ಕುಡಿದ ಅಗಸ್ತ್ಯರು ಸ್ವಾಮಿ ವಿವೇಕಾನಂದರು. ಹತ್ತಾರು ವರ್ಷ ಗುರುಮುಖದಿಂದ ಶಾಸ್ತ್ರವನ್ನು ಕಲಿತು, ಆಮೇಲೆ ಮೂವತ್ತು ನಲವತ್ತು ವರ್ಷ ಅದನ್ನು ಶಿಷ್ಯರಿಗೆ ಕಲಿಸಿದ ಕಾಯಕವನ್ನು ಮಾಡಿದ ವಿದ್ವಾಂಸರೂ, ಯಾವ ಗ್ರಂಥಗಳ ಸಾರವನ್ನು ಹೇಳಲು ಹೊರಟು ತಡಬಡಾಯಿಸುತ್ತಾರೋ ಅವುಗಳ ಬಗೆಗೆ ಸ್ವಾಮಿ ವಿವೇಕಾನಂದರು ನಿಷ್ಕೃಷ್ಟವಾಗಿ, ನಿರ್ದಿಷ್ಟವಾಗಿ, ನಿರ್ದುಷ್ಟವಾಗಿ, ಅಧಿಕಾರವಾಣಿಯಿಂದ ಹೇಳಬಲ್ಲವರಾಗಿದ್ದರು. ವಾಲ್ಮೀಕಿ ರಾಮಾಯಣ, ವ್ಯಾಸಮಹಾಭಾರತ, ಉಪನಿಷತ್ತುಗಳು, ಭಗವದ್ಗೀತೆ, ಬ್ರಹ್ಮಸೂತ್ರ, ಪಾತಂಜಲಯೋಗಸೂತ್ರ, ಷಡ್ದರ್ಶನಗಳು – ಹೀಗೆ ಭಾರತದ ಚಿಂತನಗಂಗೆಯ ಎಲ್ಲ ಹನಿಗಳನ್ನೂ ಅವರು ಪಾನ ಮಾಡಿದ್ದರು. ಹೀಗೆ ಭಾರತೀಯ ತತ್ತ್ವಶಾಸ್ತ್ರದ ಎಲ್ಲ ಮಜಲುಗಳನ್ನೂ ಅರಿತವರಿಗೆ ಸಾಮಾನ್ಯವಾಗಿ ಪಾಶ್ಚಾತ್ಯ ತತ್ತ್ವಪರಂಪರೆಯ ಜ್ಞಾನವೇ ಇರುವುದಿಲ್ಲ. ಆದರೆ ಸ್ವಾಮಿ ವಿವೇಕಾನಂದರು ಮಾತ್ರ ಸವ್ಯಸಾಚಿಯಾಗಿ ಪಾಶ್ಚಾತ್ಯ ದರ್ಶನಶಾಸ್ತ್ರವನ್ನೂ **'ಇದಮಿತ್ಥಮ್'** ಎಂದು ಖಚಿತವಾಗಿ ವಿವರಿಸಬಲ್ಲವರಾಗಿದ್ದರು. ಶೋಪೆನ್‌ಹೆವರ್, ಡ್ಯೂಸನ್, ಮ್ಯಾಕ್ಸ್‌ಮುಲ್ಲರ್ ಮುಂತಾದ ವಿದ್ವಾಂಸರು ಭಾರತದ ಉಪನಿಷತ್ತುಗಳನ್ನು ಓದಿ ಅರಗಿಸಿಕೊಂಡಿದ್ದ ಘಟಾನುಘಟಿಗಳು. ವಿವೇಕಾನಂದರು ಅವರ ಗ್ರಂಥಗಳನ್ನು ಓದಿದ್ದು ಮಾತ್ರವಲ್ಲ, ಅವರ ಜೀವನವನ್ನು ಅಭ್ಯಸಿಸಿ ಅವರ ತೀರ್ಮಾನಗಳನ್ನು ಚಿಂತನೆಯ ಒರೆಗಲ್ಲಿಗೆ ಹಚ್ಚಿ ಮೌಲ್ಯಮಾಪನ ಮಾಡಿದ್ದಾರೆ. ಮ್ಯಾಕ್ಸ್‌ಮುಲ್ಲರ್ ಅವರನ್ನು ಸ್ವತಃ ಭೇಟಿ ಮಾಡಿ, ಅವರೊಡನೆ ಚರ್ಚಿಸಿದ ಸ್ವಾಮೀಜಿಯವರು ಯಾವ ಪೂರ್ವಗ್ರಹವೂ ಇಲ್ಲದೆ ಹೀಗೆ ಹೇಳುತ್ತಾರೆ : "It was neither the philologist nor the scholar that I saw, but a soul that in every day realizing its oneness with the Brahman, a heart that is every moment expanding to

